Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 17] ಶುಕ್ರವಾರ 10—10—47 [ಬಿಡಿ ಪ್ರತಿ 3 ಪೈ

ಸಂಪೂರ್ಣ ಜವಾಬ್ದಾರಿ ಸರ್ಕಾರ

ಮೈಸೂರು ಕಾಂಗ್ರೆಸ್ ಗುರಿ

ಬೆಂಗಳೂರು, ಅ 9 — ದಿವಾನ್ ಆಕರ್ಷಣೆಗೂ ಮತ್ತು ಸರ್ವಾಧಿಕಾರಿ ಪೆಡ್ಡಿಗೂ ನಿನ್ನೆ ಸಂಜೆ 5-30 ರಿಂದ 7-30 ರ ವರೆಗೆ ಸಂಭಾಷಣೆ ನಡೆಯಿತು

‡ ಸಂಪೂರ್ಣ ಜವಾಬುದಾರಿ ಸರಕಾರವೇ ಕಾಂಗ್ರೆಸಿನ ಗುರಿ ಮತ್ತು ತತ್ಕಾಲ ಸರಕಾರ ಕೂಡಲೇ ಸ್ಥಾಪನೆ ಆಗಬೇಕು — ಎಂದು ಶ್ರೀ ಕೆ. ಸಿ. ರೆಡ್ಡಿ ಕಾಂಗ್ರೆಸ್ ಪರತ್ತುಗಳನ್ನು ಮಂಡಿಸುತ್ತಾ ತಿಳಿಸಿದರು.

‡ ದಿವಾಕರವರು ಹಲವು ಸಲಹೆಗಳನ್ನಿತ್ತಿರುವರು.

ಆ ಸಲಹೆಗಳನ್ನು ಕಾಂಗ್ರೆಸ್ ನಾಯಕರು ಪರಿಶೀಲಿಸುತ್ತಿರುವರು.

ಶ್ರೀಮನ್ಮಹಾರಾಜರ ಘೋಷಣೆಯಿಂದ ಕಾಂಗ್ರೆಸ್ ಬೇಡಿಕೆ ಈಡೇರಿಲ್ಲವಾದ್ದರಿಂದ ಸತ್ಯಾಗ್ರಹ ಸಿಲ್ಲಿಸಬೇಡಿ ಎಂದು ನಾಯಕರಿಗೆ ನಾನಾ ಕಡೆಯಿಂದ ತಾರು, ಪತ್ರ ಬರುತ್ತಿವೆ

ವಾಷಿಂಗ್ಟನ್, ಅ 9 — ಅಧ್ಯಕ್ಷ ಟ್ರೂಮನ್, ಪಾಕೀಸ್ತಾನಕ್ಕೆ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ.

ನವದೆಹಲಿ, ಅ 8 — ಧೈರ್ಯಪೂರಿತ ಅಹಿಂಸೆಯನ್ನು ಅಭ್ಯಾಸಿಸಿ. ಮಿಲಿಟರಿ ಮತ್ತು ಪೋಲೀಸರು ಕೋಮುವಾರು ಭಾವನೆಯನ್ನು ದೂರ ಮಾಡಬೇಕು ಎಂದು ಗಾಂಧೀಜೀ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು.

ವೈಸೂರು ಅತಿ ಕೋರ್ಟಿನ ದ್ವಾರಗಳ ಬಳಿ ಈ ದಿವಸ ಪ್ರಬಲವಾದ ಪಿಕೆಟ್ಟಿಂಗ್ ನಡೆಯಿತು. ಹಲವರನ್ನು ಹ್ಯಾಸನಲ್ಲಿ ಕರೆದೊಯ್ಯಲಾಯಿತು.

ಬೆಂಗಳೂರಿನಿಂದ ಈ ಮಧ್ಯಾಹ್ನ ಪ್ಯಾಲುಗಾಡಿ ಒಂದಿತು.

ಬೊಂಬಾಯಿ, ಅ 8 — ಗಾಂಧೀ ಜಯಂತಿ ಸಮಾರಂಭದಲ್ಲಿ ಮಾಡಿದ ಭಾಷಣದಲ್ಲಿ ಖಾಧೀ ಧಾರಿಗಳೆಲ್ಲರೂ ಗಾಂಧೀಜೀ ಅನುಯಾಯಿಗಳಲ್ಲ ಎಂದು ಆಚಾರ್ಯ ಕೃಪಲಾನಿ ತಿಳಿಸಿದರು.

ನಿನ್ನೆ ಬೆಂಗಳೂರು ಕೋರ್ಟಿನ ಬಳಿ ಪಿಕೆಟಿಂಗ್ ನಡೆಸುತ್ತಿದ್ದ ಬಾಲಕಿಯರನ್ನು ಸೆಂಟ್ರಲ್ ಜೇಲಿನ ಸ್ಪೆಷಲ್ ಕೆಲಸಗಾರರ ಮೂಲಕ ಎಳೆಸಿ ವ್ಯಾನಿಗೆ ತುಂಬಿದರು.

—

ಪ್ರೆಂಚರ ಆತ್ಯಾಚಾರ

ಸೈಗಾನ್ ಅ 8— ಹೊನ್ಯಾಗೆ ನೂರು ಮೈಲಿ ದೂರವಿರುವ ವಿಯಟ್ನಾಮಿನ ಅಧ್ಯಕ್ಷರ ಮುಖ್ಯ ಕಛೇರಿ ಇರುವ 'ಬಾಕ್ಕ' ಮೇಲೆ ಧಾಳಿನಡೆಸುತ್ತಿದ್ದಾರೆಂದೂ, ಆ ಧಾಳಿಯನ್ನು ಸರ್ವ ವಿಧದಿಂದಲೂ ತಡೆಗಟ್ಟುವುದಾಗಿಯೂ ವಿಯಟ್ನಾಂ ರೇಡಿಯೋ ಸುದ್ದಿ.

ಸಿಕ್ಖರ ಸಾಹಸ

ನವದೆಹಲಿ ಅ 7 — ದೆಹಲಿಗೆ 33 ಮೈಲಿ ದೂರವಿರುವ ಧನಕೋಟ್ ಎಂಬ ಗ್ರಾಮದ ಮೇಲೆ ಧಾಳಿ ನಡೆಸುವ ವಿಷಯ ತಿಳಿದೊಡನೆಯೇ ಸಿಕ್ ಸೈನಿಕರು ಆ ಪ್ರದೇಶಕ್ಕೆ ಹೋಗಿ ಕರ್ಫ್ಯೂ ಜಾರಿ ಮಾಡಿ ಧಾಳಿಕಾರರನ್ನು ಓಡಿಸಿದರೆಂದೂ, ಆ ಊರಿನ ಮುಸ್ಲಿಮರು ಸೈನಿಕರಿಗೆ ಕೃತಜ್ಞತೆಯನ್ನು ತಿಳಿಸಿರುವುದಾಗಿಯೂ ಇಂಡಿಯಾ ಡೊಮಿನಿಯನ್ನಿಗೆ ವಿಧೇಯರಾಗಿರುವುದಾಗಿ ತಿಳಿಸಿದರೆಂದೂ ವರದಿಯಾಗಿದೆ.

ಜವಾಬ್ದಾರಿ ನರಕಾರ

— 6 —

ಅಲ್ಪ ಸಂಖ್ಯಾಕರ ನ್ಯಾಯವಾದ ಹಿತರಕ್ಷಣೆಯೆಂಬುದೊಂದು ಪ್ರತ್ಯೇಕಿಸಿದ ವಿಷಯವಾಗಿದೆ. ಶಾಸನ ಸಭೆಗಳಲ್ಲಿ ಅಲ್ಪ ಸಂಖ್ಯಾತಾಗೆ ಮತ್ತು ಹಿಂದುಳಿದವರಿಗೆ ಅವರ ಜನಸಂಖ್ಯಾನುಸಾರವಾಗಿ ಸ್ಥಾನಗಳು ಕಾದಿಡಲ್ಪಟ್ಟು ಅವರ ನ್ಯಾಯವಾದ ಹಿತರಕ್ಷಣೆಯನ್ನು ಅವರೇ ಮಾಡಿಕೊಳ್ಳುತ್ತಾರೆ. ಹಾಗೆ ತಮ್ಮ ತಮ್ಮ ಹಿತರಕ್ಷಣೆಯನ್ನು ಅವರವರೇ ಯೋಚಿಸಿಕೊಂಡು ಸಾಧಿಸಲಾರರಾದರೆ, ಅವರಿಗೆ ಹಿತವೆಂಬುದು ಬೇರೆಯವರಿಗೆ ತಿಳಿಯುವ ಬಗೆಯಾದರೂ ಹೇಗೆ? ಈವರೆಗೆ ಶಾಸನ ಸಭೆಗಳಲ್ಲಿ ಅಲ್ಪ ಸಂಖ್ಯಾತರಿಗೆ ಅಥವಾ ಹಿಂದುಳಿದವರಿಗೆ ಸರ್ಕಾರದವರು ಕೊಡಬೇಕೆಂದು ಹೇಳಿದ ರಿಯಾಯಿತಿಗಳಿಗೆ ಯಾರಿಂದಲೂ ಯಾವಾಗಲೂ ವಿರೋಧಬಂದ ಉದಾಹರಣೆಯೂ ಇಲ್ಲ. ಅದಕ್ಕೆ ಬದಲಾಗಿ ಹಿಂದುಳಿದ ಪಂಗಡಗಳವರಿಗೆ ಭೂಮಿ, ವಸತಿ, ವಿದ್ಯಾ ಇತ್ಯಾದಿಗಳ ವಿಷಯದಲ್ಲಿ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಇತರರು ಎಷ್ಟೋ ವಾದಿಸಿ ನಿರ್ಣಯಗಳನ್ನು ಪಾಡಿರುವುದು ಈಗಲೂ ಶಾಸನ ಸಭೆಗಳ ಕಡತವಲ್ಲಿ ಇವೆ. ಆ ನಿರ್ಣಯಗಳ ಪ್ರಕಾರ ಅಷ್ಟು ಸೌಕರ್ಯಗಳು ಅವರಿಗೆ ಇನ್ನೂ ದೊರಕಿಲ್ಲ. ಹೀಗಿರುವಾಗ ಸಾರ್ವಜನಿಕರ ಪ್ರತಿನಿಧಿಗಳಿಗೆ ಹಿಂದುಳಿದವರ ಅಥವಾ ಅಲ್ಪ ಸಂಖ್ಯಾತರ ವಿಷಯದಲ್ಲಿ ಆದರವಿಲ್ಲವೆಂದು ಅಯಿತೇ? ಎಲ್ಲರಿಗೂ ಸಮಾನವಾದ ಸೌಕರ್ಯಗಳು ಇರಬೇಕೆಂಬುದೇ ಪ್ರಜಾಸ್ವಭುತ್ವದ ತತ್ವ. ಎಲ್ಲರೂ ಸಮಾನ ಪ್ರಜೆಗಳು. ಅವರಲ್ಲಿ ಹಿಂದುಳಿದವರು ಮತ್ತು ಮುಂದುವರಿದವರು ಎಂಬುವುದು ಇಲ್ಲವೇ ಇಲ್ಲ ಜನರಲ್ಲಿ ಈ ಭೇದ ಭಾವನೆ ಇರಕೂಡದು ಎಂಬುವುದೂ ಜವಾಬ್ದಾರಿ ಸರ್ಕಾರದ ಉದ್ದೇಶಗಳಲ್ಲಿ ಒಂದು. ಈ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಎಂಬ ಶಬ್ದಗಳು ಭೇದ ಕಲ್ಪಿತವಾಗಿರುವುದರಿಂದ ಜನತೆಯ ಐಕ್ಯದ ದೃಷ್ಟಿಯಿಂದ ಬಹು ಅಪಾಯಕರವಾಗಿವೆ ಈ ಭೇದಭಾವನೆಯನ್ನು ಮೊತ್ತಮೊದಲು ಕಿತ್ತೊಗೆಯಬೇಕಾದುದು ಅತ್ಯಗತ್ಯವೆ. ಮುಂದೆ ಪರಸ್ಪರ ಕೋಮುವಾರು ದ್ವೇಷವು ಬೆಳೆದು ಜನಜೀವನವು ನರಕದಂತೆ ಮಾಡುವ ವಿಷಜೀವನವನ್ನು ಪೋಷಿಸಲು ಪ್ರಯತ್ನಿಸಿ ಸಲಹೆ ಮಾಡಿದ ಸಮಿತಿಯವರು ದೇಶಕ್ಕೆ ದ್ರೋಹವನ್ನೇ ಮಾಡಿರುತ್ತಾರೆಂದರೆ ಹೆಚ್ಚೇನೂ ಅಲ್ಲ.

ಇನ್ನು ರಾಜರು, ರಾಜವಂಶೆನ, ಸಿಂಹಾಸನಾಧಿಕಾರ, ಇತ್ಯಾದಿ ವಿಷಯುಗಳಲ್ಲಿ ಯಾರೂ ಅನ್ಯಥಾ ಹೇಳುವಂತಿಲ್ಲ. ಅದು ಸಂಪೂರ್ಣವಾಗಿ ಅವರ ಗೃಹಕೃತ್ಯಕ್ಕೆ ಸೇರಿದ ವಿಷಯ. ಆದರೆ 'ಅರಮನೆ ಖಜಾನೆ' ಎಂಬುದಾಗಿ ಸೇರಿಸಿರುವುದು ಸ್ವಲ್ಪ ವಿಚಾರಣೀಯವು. ಆ ಶಬ್ದವು 'ಮೊಗುಂ' ಇದ್ದಷ್ಟು ಅಸ್ಪಷ್ಟವೂ ಸಂದೇಹಜನಕವೂ ಇದು ವ್ಯಾಖ್ಯಿಯನ್ನು ವಿಸ್ತಾರವುದಾಗಿದೆ.

ಈ 'ಮಾದರಿಯ ಜವಾಬ್ದಾರಿ ಸರ್ಕಾರ' ಸಲಹೆ ಮಾಡಿದ ಧೀಮಂತರು, ರಾಜ್ಯಾಂಗರಚನೆಮಾಡಲು ಶಾಸನ ಸಭೆಗಳಿಂದ ಚುನಾಯಿತ ಸದಸ್ಯರ ಸಮಿತಿಯೊಂದನ್ನು ರಚಿಸಲು ಸೂಚಿಸಿದ್ದಾರೆ. ಸೂಚನೆಯು ಬಹು ಉತ್ತಮವಾದುದೇ ಸರಿ. ಆದರೆ, ಚುನಾಯಿತ ಸದಸ್ಯರ ಆ ಸಮಿತಿಯವರು ಸೇರಿ ಚರ್ಚಿಸಬೇಕಾದ ವಿಷಯುಗಳು ರಾಜ ಸಂದೇಶ (ಅರ್ಕಾಟ್ಟರ ಸಲಹೆ) ದ ಸಂಮಿತಿಯೊಳಗಾಗಿಯೇ ಇರತಕ್ಕದ್ದಾಗಿದೆ ಎಂಬುದನ್ನು ಯಾರೂ ಮರೆಯಕೂಡದು. ಆಂದಬಳಿಕ ಸಮಿತಿಯವರು ಸೇರಿ ಚರ್ಚಿಸಿ ಸಿದ್ಧಾಂತಕ್ಕೆ ಬರಬಹುದಾದ ವಿಷಯವಾದರೂ ಯಾವುದು?

[ಸಶೇಷ

ಕಾಂಗ್ರೆಸಿಗರ ಘರ್ಷಣೆ

ಗಾಂಧೀಜಯಂತಿ ಮಹೋತ್ಸವದ ಸಂಧರ್ಭದಲ್ಲಿ ತಿರುವಾಂಕೂರು ಸಂಸ್ಥಾನ ಕಾಂಗ್ರೆಸಿಗೂ ಮತ್ತು ತಿರುವಾಂಕೂರು ಕಪಿಳ ಕಾಂಗ್ರೆಸಿನರಿಗೂ ಘರ್ಷಣೆ ಯಾಯಿತೆಂದು ವರದಿ.

ಸಿನಿಮಾಗಳ ಬಂದು

ಚಿತ್ರ ತೆರಿಗೆಯ ವಿಷಯದಲ್ಲಿ ಒಪ್ಪಂದಕ್ಕೆ ಬಂದಿದ್ದರೆ ಮಾತ್ರ ಸಾವಿರ ಚಿತ್ರಗಳು ಬ್ರಿಟನ್ನಿನಲ್ಲಿ ಬಂದಾಗುವವು.

At Opera
From 4—10—47
PHANTOM
(Serial)

Edited, Printed and Published by M. S Krishna Rao at the Satyavadi Press Chamaraja Agrahar Mysore.

ರೈತರ ಪ್ರದರ್ಶನ

ಎ ಐ ಸ್ ಶಾಸನ ಸಭೆ ಕಾಂಗ್ರೆಸ್ ಪಕ್ಷ ಮೊನ್ನೆ ಬುಧವಾರ ಜಮಿನ್ದಾರಿ ರದ್ದಿನ ಬಗ್ಗೆ ಅಭಿಪ್ರಾಯಕೊಡಲು ಸಭೆಗೂಡಿತ್ತು. ಸಭಾಂಗಣ ಹೊರಗಡೆ ಇದ್ದ ಜಮಿನ್ದಾರ್ ಮತ್ತು ಇನಾಮ್ದಾರ್ ರೈತರುಗಳು 'ಜಮಿನ್ದಾರ್ ನಿರ್ನಾಮವಾಗಲಿ, ಇನಾಂದಾರ್ ನಿರ್ನಾಮವಾಗಲಿ' ಎಂಬ ಘೋಣೆಗಳನ್ನು ಕೂಗುತ್ತಿದ್ದರು.

ಆರಾಮ ಕುರ್ಚಿ ಸಾದೆಯೆ ?

ಬಸ್ ಪ್ರಯಾಣೀಕನೊಬ್ಬ ಮೈಸೂರು ಸಂಸ್ಥಾನ ಪ್ರದೇಶದಿಂದ ಆರಾಮ ಕುರ್ಚಿಯೊಂದನ್ನು ಮದನಪಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದನು. ಪ್ರಯಾಣೀಕನನ್ನು ರಾಯಲ್ಪಾಡ್ ಬಳಿ ಮೈಸೂರು ಕಾಸ್ಟ್ಲಬಲ್ ಕಡೆದ ! ಸಂಸ್ಥಾನದ ಸಾದೆ ನಿಯಂತ್ರಣ ಆಜ್ಞೆಯನ್ನು ಮುರದ ವಸ್ತು ಕೊಂಡು ಹೋಗಿ ಉಲ್ಲಂಘಿಸುತ್ತಿದ್ದೀಯ ಎಂದು ಪೋಲೀಸನವನು ವಾದ ಆರಂಭಿಸಿಬಿಟ್ಟ ! ಬಿಸಿ ಬಿಸಿ ಚರ್ಚೆ ನಡೆದನಂತರ ಕಟ್ಟಕಡೆಗೆ ಪೋಲೀಸನು ಅವನನ್ನು ಹೋಗಗೊಟ್ಟ !

ಉಪನ್ಯಾಸ

ಮೈಸೂರು ಸಿಟಿ ಕೋಅಪರೇಟೀವ್ ಬೇಂಕಿನ ಸಹಕಾರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಬೇಂಕಿನ ಸಭಾಂಗಣದಲ್ಲಿ 'ಸಹಕಾರ ಅಭಿವೃದ್ಧಿಗೆ ಇರುವ ಪ್ರತಿಬಂಧಕಗಳು ಮತ್ತು ಅವುಗಳಿಗೆ ಸೂಕ್ತವಾದ ಪರಿಹಾರಗಳು' ಎಂಬ ವಿಷಯವಾಗಿ ಶ್ರೀ ಶ್ರೀನಿವಾಸಯ್ಯನವರು ನಾಡಿದ್ದು ಸಂಜೆ 6 ಗಂಟೆಗೆ ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಆರಂಭೋತ್ಸವ

ಶಿವರಾಂಪೇಟೆಯಲ್ಲಿರುವ ಹಿಂದೂ ಮಹಾಸಭೆ ಕಛೇರಿಯಲ್ಲಿ ತಾ || 12 ನೇ ಭಾನುವಾರ ಸಂಜೆ ಹಿಂದೀ ತರಗತಿ ಆರಂಭೋತ್ಸವ ಜರುಗುವುದು

ಪಂ || ಮಂಜುನಾಥರು 'ಹಿಂದೀ ಭಾಷೆಯ ಅವಶ್ಯಕತೆ' ಎಂಬ ವಿಷಯವಾಗಿ ಭಾಷಣ ಮಾಡುವರು.

ಮ || ಕೆ. ಶೇಷಾದ್ರಿಯವರು ಅಧ್ಯಕ್ಷತೆ ವಹಿಸುವರು.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ, ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಜಾಯಿಲೆ ಬರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

SAVE THE COW

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

Woodlands

Morning Shows at 10-30

From 10—10—47 For 4 days

Till we meet again

— with —

BARBARA BRITON

ವುಡ್ ಲ್ಯಾಂಡ್ಸ್

ಮನಮೋಹನ 3 ನೇ ವಾರ

ರಂಜನ — ಜೀಪ್ — ಬೇಬಿ ಮಾಧುರಿ

ಪಾತ್ರವಹಿಸಿರುವ

ನೈಮಾ

(ಆನೋಘ ಹಿಂದಿ ಚಿತ್ರ)

ಪ್ರತಿ ದಿನ 2 ಆಟಗಳು

ನೋಟೀಸ್

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಇಲಾಖೆಗೆ ಕಚೇರಿಗಾಡಿಗಳ ಉಪಯೋಗಕ್ಕಾಗಿ ಐದು ಜೊತೆ ಎತ್ತುಗಳು ಬೇಕಾಗಿರುವುದರಿಂದ ಮಾಲೀಕರುಗಳು ಪುಷ್ಟಿಕರವಾದ ಮತ್ತು ಸರಿಯಾದ ಮೈಸವ ಎತ್ತುಗಳನ್ನು ಬಿಕ್ರಿಗಾಗಿ ತಾರೀಜು 16—10—47 ನೇ ಗುರುವಾರ ಸಾಯಂಕಾಲ ಮುನಿಸಿಪಲ್ ಆಫೀಸಿಗೆ ಹಾಜರ್ಮಾಡಬಹುದು. ಖರೀದಿ ನಿಷ್ಕರ್ಷೆಯಾದ ಕೂಡ್ಲೇ ಮೊಬಲಗು ಪಾವತಿಮಾಡಲಾಗುತ್ತೆ.

(ಸಹಿ) ಇ. ಆನಂತರಾವ್

ಹೆಲ್ತ್ ಆಫೀಸರ್

ಮೈಸೂರು ಸಿಟಿ

2—10—47

SHAKTI

SUDHA